ಸಂದರ್ಶನ: **ಹೇಮಾ ಎಸ್.**

# ನೂರು ಸ್ವರಗಳ ಲೇಖ ಲೋಕ
# ಉಮಾ ರಾವ್
## ಜೊತೆ ಒಂದು ಸಾಹಿತ್ಯಿಕ ಸಂವಾದ

ಉಮಾ ರಾವ್ ಕನ್ನಡದ ಮಹತ್ತ್ವದ ಕತೆಗಾರ್ತಿಯರಲ್ಲಿ ಒಬ್ಬರು. ಕತೆ, ಕಾದಂಬರಿ, ಕವಿತೆ, ಅಂಕಣ, ಪ್ರವಾಸಕಥನ, ಅನುವಾದ, ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿಮಾಡಿದ್ದಾರೆ. ಬರವಣಿಗೆ ಮಾತ್ರವಲ್ಲದೆ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಜೊತೆಗೆ, ಟೆಲಿ ಫಿಲ್ಮ್‌ಗಳು, ಧಾರಾವಾಹಿಗಳಿಗೆ ಚಿತ್ರಕಥೆ, ಸಂಭಾಷಣೆಗಳನ್ನು ಬರೆದಿದ್ದಾರೆ. ಬಹುಮುಖ ಆಸಕ್ತಿ ಹೊಂದಿರುವ, ತುಂಬು ಜೀವನಪ್ರೀತಿಯ ಲೇಖಕಿಯೊಂದಿಗಿನ ಮಾತುಕತೆ ಮಳೆಗಾಲದಲ್ಲಿ ಪಶ್ಚಿಮ ಘಟ್ಟಗಳಲ್ಲಿ ಕೈಗೊಂಡ ಪ್ರವಾಸದಂತಹ ಅನುಭವವವನ್ನು ಕೊಟ್ಟಿತು. ಸಂದರ್ಶನದ ನೆಪದಲ್ಲಿ ಅವರೆಲ್ಲ ಕೃತಿಗಳನ್ನು ಒಟ್ಟಿಗೆ ಓದಿದಾಗ, 'ಅರೆ! ಈಕೆ ಎಷ್ಟೆಲ್ಲ ರೀತಿಯ ಬರವಣಿಗೆ ಮಾಡಿರುವರಲ್ಲ' ಎಂದು ಅಚ್ಚರಿಯಾಯಿತು. 'ಬಿಸಿಲು ಕೋಲು' ಓದಿದ ಒಂದೆರಡು ದಿನವಂತೂ ಬರಿ ನೆರಳು – ಬೆಳಕುಗಳನ್ನು ಗಮನಿಸುವುದೇ ಕೆಲಸವಾಗಿ ಹೋಗಿತ್ತು. ವಿ.ಕೆ. ಮೂರ್ತಿ ಅವರಂತಹ ಪ್ರತಿಭಾವಂತ ಛಾಯಾಗ್ರಾಹಕನ ಬದುಕನ್ನು ಈ ಕೃತಿ ಅತ್ಯುತ್ತಮವಾಗಿ ಕಟ್ಟಿಕೊಡುತ್ತದೆ. 'ಮುಂಬೈ ಡೈರಿ'ಯ ಅಂಕಣಗಳ ಓದು ಚಂದದ ಅನುಭವವನ್ನು ಕೊಟ್ಟರೆ, ಅವರ ಕತೆಗಳ ಓದು ಮತ್ತೊಂದು ಬಗೆಯ ಅನುಭವವನ್ನು ಕೊಡುತ್ತದೆ. ಈಗಾಗಲೇ ವಿಮರ್ಶಕರು ಗುರುತಿಸಿರುವಂತೆ 'ನಗರ ಪ್ರಜ್ಞೆ' ಹಾಗೂ 'ಲಿಂಗ ಕೇಂದ್ರಿತ'ವಲ್ಲದ ಸಂವೇದನೆ ಉಮಾ ಅವರ ಕತೆಗಳ ಬಹುಮುಖ್ಯ ಲಕ್ಷಣಗಳು. 'ಅಗಸ್ತ್ಯ', 'ದೇಹಾಂತ', 'ಅಂತರ್ಜಾಲ', 'ಟೇಬಲ್ ಸ್ಪೇಸ್'ನಂತಹ ಕತೆಗಳು, 'ನೂರು ಸ್ವರ' ಕಾದಂಬರಿ ಇವೆಲ್ಲವೂ ಕತೆಗಾರ್ತಿಯ ಬದುಕಿನ ಅನುಭವಗಳ ದಟ್ಟ ಅಭಿವ್ಯಕ್ತಿಗೆ ಸ್ಪಷ್ಟ ನಿರ್ದಶನಗಳಾಗಿವೆ. 'ನೂರು ಸ್ವರ' ಅವರ ಬಹುಚರ್ಚಿತ ಕಾದಂಬರಿ. ಇದರಲ್ಲಿ ಆಧುನಿಕ ಮನುಷ್ಯನ ಸಂವೇದನೆಗಳು ಬಹಳ ಸಶಕ್ತವಾಗಿ ಮೂಡಿಬಂದಿವೆ.